# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1002

ಸದಸ್ಯರ ಹೆಸರು : ಶ್ರೀ ಸಿ.ಪಿ.ಯೋಗೇಶ್ವರ್
(ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 24.07.2024

ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಾಗಡಿ ತಾಲ್ಲೂಕಿನ ಹೊಸಪೇಟೆ ಗ್ರಾಮದಲ್ಲಿರುವ ಸರ್ಕಾರಿ ಜಮೀನಿನ ಸ್ಮಶಾನ ಭೂಮಿ ಎಷ್ಟು; (ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರ ಒದಗಿಸುವುದು) | ಮಾಗಡಿ ತಾಲ್ಲೂಕು, ಕಸಬಾ ಹೋಬಳಿ, ಹೊಸಪೇಟೆ ಗ್ರಾಮವು ತಿರುಮಲೆ ಕಂದಾಯ ಗ್ರಾಮದ ದಾಖಲೆ ಗ್ರಾಮವಾಗಿದ್ದು, ಸದರಿ ತಿರುಮಲೆ ಗ್ರಾಮದ ಸ.ನಂ:40 ರಲ್ಲಿ 1-10 ಎಕರೆ/ಗುಂಟೆ ಸರ್ಕಾರಿ ಗೋಮಾಳದಲ್ಲಿ ಸಾರ್ವಜನಿಕ ಸ್ಮಶಾನ ಇರುತ್ತದೆ. |
| ಆ) | ಮಾಗಡಿ ಟೌನ್‌ನ ಹೊಸಪೇಟೆ ಗ್ರಾಮದಲ್ಲಿ ವಾಸಿಸುವ ಮೇದರ ಜನಾಂಗಕ್ಕೆ ಸ್ಮಶಾನ ಭೂಮಿಯನ್ನು ನೀಡಲಾಗಿದೆಯೇ; ನೀಡಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ನೀಡಲಾಗಿದೆ; (ಸರ್ವೆ ನಂಬರ್ ಹಾಗೂ ವಿಸ್ತೀರ್ಣ ವಿವರ ಒದಗಿಸುವುದು) | ಹೊಸಪೇಟೆ ಗ್ರಾಮದಲ್ಲಿ ವಾಸಿಸುವ ಮೇದರ ಜನಾಂಗಕ್ಕೆ ಪ್ರತ್ಯೇಕವಾಗಿ ಸ್ಮಶಾನ ಜಮೀನನ್ನು ಮಂಜೂರು ಮಾಡಿರುವುದಿಲ್ಲ. |
| ಇ) | ಸರ್ಕಾರದಿಂದ ನೀಡಿರುವ ಜಮೀನು ಸ್ಮಶಾನಕ್ಕೆ ಯೋಗ್ಯವಾಗಿಲ್ಲದ ಕಾರಣ ಹಾಗೂ ನೀಡಿರುವ ಸ್ಥಳ ಪೆರಿಫೆರಲ್ ರಿಂಗ್ ರಸ್ತೆ ಹಾದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಿಂಗ್ ರಸ್ತೆ ಹಾದು ಹೋಗುವ ಕಾರಣ ಹೊಸಪೇಟೆಯ ಮೇದರ್ ಜನಾಂಗದವರಿಗೆ ಪರ್ಯಾಯ ಜಮೀನನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪರ್ಯಾಯ ಜಮೀನನ್ನು ನೀಡಲಾಗುವುದು? (ಸಂಪೂರ್ಣ ವಿವರ ಒದಗಿಸುವುದು) | ಹೊಸಪೇಟೆ ಗ್ರಾಮವು ತಿರುಮಲೆ ಕಂದಾಯ ಗ್ರಾಮದ ದಾಖಲೆ ಗ್ರಾಮವಾಗಿದ್ದು, ಸದರಿ ತಿರುಮಲೆ ಗ್ರಾಮದ ಸ.ನಂ:2ರಲ್ಲಿ 2-38 ಎಕರೆ/ಗುಂಟೆ ಹಿಂದೂ ರುದ್ರಭೂಮಿ ಇರುತ್ತದೆ ಹಾಗೂ ಮಾಗಡಿ ಗ್ರಾಮದ ಸ.ನಂ.242 ರಲ್ಲಿ 4-09 ಎಕರೆ/ಗುಂಟೆ ವಿಸ್ತೀರ್ಣವು ಸ್ಮಶಾನ ಜಮೀನಾಗಿದ್ದು, ಸದರಿ ಜಮೀನಿನಲ್ಲಿ ವಿದ್ಯುತ್ ಚಿತಾಗಾರ ಸೌಲಭ್ಯವಿರುತ್ತದೆ. ಸದರಿ ಸ್ಮಶಾನವನ್ನು ಹೊಸಪೇಟೆ ಗ್ರಾಮದ ಗ್ರಾಮಸ್ಥರು ಹಾಗೂ ಮೇದರ ಜನಾಂಗದವರು ಉಪಯೋಗಿಸಬಹುದಾಗಿರುತ್ತದೆ. ಆದ್ದರಿಂದ ಪರ್ಯಾಯ ಸ್ಮಶಾನ ಜಮೀನಿನ ಅವಶ್ಯಕತೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 68 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು